ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ದಿನಾಂಕ 1-7-97 ರಲ್ಲಿ ಇದ್ದಂತೆ ಬಾಕಿ ಇರುವ ಪ್ರಕರಣಗಳು ಈ ಕೆಳಗಿನಂತಿದೆ :-

| | ಸಿವಿಲ್ | ಕ್ರಿಮಿನಲ್ |
|---|---|---|
| ಕೊಡಗು-ಮಡಿಕೇರಿ | 2648 | 3751 |
| ವಿರಾಜಪೇಟೆ | 1392 | 1329 |
| ಸೋಮವಾರಪೇಟ್ | 405 | 1325 |

ಆ) ತ್ವರಿತವಾಗಿ ವಿಲೇವಾರಿ ಮಾಡಲು ಈ ಹಿಂದೆ ರಾಜ್ಯ ಕಾನೂನು ನೆರವು ಸಮಿತಿಗಳ ಮೂಲಕ ಲೋಕ ಅದಾಲತ್‌ಗಳನ್ನು ಎಲ್ಲಾ ನ್ಯಾಯಾಲಯಗಳಲ್ಲಿ ನಡೆಸಿ ಕೇಸುಗಳ ತ್ವರಿತ ವಿಲೇವಾರಿಗಳನ್ನು ಮಾಡಲಾಗುತ್ತಿತ್ತು. ಈಗ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾನೂನು ಸೇವ ಪ್ರಾಧಿಕಾರಗಳ ಮುಖಾಂತರ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ?

## ಮಾಗಡಿಯಲ್ಲಿ ಕೆಂಪೇಗೌಡ ಜಿಲ್ಲೆ ಉತ್ಸವ

2309 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರತಿ ಜಿಲ್ಲೆಗೊಂದು 'ಜಿಲ್ಲಾ ಉತ್ಸವ' ನಡೆಸುವಂತೆ 1997-98ನೇ ಸಾಲಿನಲ್ಲಿ ಮಾಗಡಿಯಲ್ಲಿ 'ಕೆಂಪೇಗೌಡ ಜಿಲ್ಲಾ ಉತ್ಸವ' ನಡೆಸುವ ಪ್ರಸ್ತಾವವು ಸರ್ಕಾರ ಪರಿಶೀಲನೆಯಲ್ಲಿದೆಯೇ?*

*ಆ) ಹಾಗಿದ್ದಲ್ಲಿ, ಯಾವಾಗ ನಡೆಸಲಾಗುವುದು?*

*ಇ) ಈ ಉತ್ಸವದ ರೂಪರೇಷೆ ಹಾಗೂ ಅಂದಾಜು ವೆಚ್ಚವೇನು (ಸಂಪೂರ್ಣ ಮಾಹಿತಿ ನೀಡುವುದು)?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಆ) ಮತ್ತು ಇ) ರಾಜ್ಯದಲ್ಲಿ ಜಿಲ್ಲಾ ಉತ್ಸವಗಳನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಆಯಾಯ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಗೌರವಾಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಧ್ಯಕ್ಷತೆಯಲ್ಲಿ ಜಿಲ್ಲಾ ಉತ್ಸವ ಸಮಿತಿಗಳನ್ನು ರಚಿಸಲಾಗಿದೆ ಆದ್ದರಿಂದ ಜಿಲ್ಲಾ ಉತ್ಸವ ನಡೆಸುವ ವಿಷಯವನ್ನು ಆಯಾಯ ಜಿಲ್ಲಾ ಉತ್ಸವ ಸಮಿತಿಗಳ

ತೀರ್ಮಾನಕ್ಕೆ ಬಿಡಲಾಗಿದೆ. ಅದರಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಾವ ಉತ್ಸವವನ್ನು ಹಾಗೂ ಉತ್ಸವವನ್ನು ನಡೆಸುವ ಸ್ಥಳದ ತೀರ್ಮಾನವನ್ನು ಗ್ರಾಮಾಂತರ ಜಿಲ್ಲಾ ಉತ್ಸವ ಸಮಿತಿಗೆ ಬಿಡಲಾಗಿದೆ. ಉತ್ಸವ ನಡೆಸಲು ಬೇಕಾಗುವ ವೆಚ್ಚವನ್ನು ಅವರೇ ತೀರ್ಮಾನಿಸುವರು.

**ಮಾಗಡಿ ಜಿಲ್ಲಾ ಹೆದ್ದಾರಿಗಳಿಗೆ ಡಾಂಬರೀಕರಣ**

2310 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿರುವ ಜಿಲ್ಲಾ ಹೆದ್ದಾರಿಗಳ ಉದ್ದ ಎಷ್ಟು?*

ಆ) *ಈ ರಸ್ತೆಗಳಲ್ಲಿ ಎಷ್ಟು ಕಿ.ಮೀ.ಗೆ ಡಾಂಬರೀಕರಣ ಮಾಡಿರುವುದಿಲ್ಲ?*

ಇ) *ಈ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ತಗಲುವ ಒಟ್ಟು ವೆಚ್ಚವೆಷ್ಟು?*

ಈ) *ಈ ಕಾಮಗಾರಿಯನ್ನು ಸರಕಾರವು ಯಾವಾಗ ಕೈಗೊಳ್ಳುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಹೆದ್ದಾರಿಗಳ ಒಟ್ಟು ಉದ್ದ 167 ಕಿ.ಮೀ. ಇರುತ್ತದೆ.

ಆ) 46.0 ಕಿಮೀ. ಉದ್ದಕ್ಕೆ ಡಾಂಬರು ಮಾಡಿರುವುದಿಲ್ಲ.

ಇ) ತಗಲುವ ಒಟ್ಟು ವೆಚ್ಚ 115.00 ಲಕ್ಷ ರೂ.ಗಳು.

ಈ) ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

**ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಭರ್ತಿ**

2312 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಎಷ್ಟು ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಸಂದರ್ಶನ ನಡೆದಿದೆ?*

ಆ) *ಈ ಹುದ್ದೆಯ ನೇಮಕಾತಿಯ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಾರಣಗಳೇನು?*

ಇ) *ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 750